## ದಿನಾಂಕ:28-08-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ:88/2010-11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಲ್ಯಾಂಡ್ ಆರ್ಮಿಯವರನ್ನು ಬ್ಲಾಕ್ ಲಿಸ್ಟ್ ಮಾಡಲಾಗಿದ್ದು, ಹಿಂದೆ ಇವರು ಮಾಡಿರುವ ಕಾಮಗಾರಿ ಕಳಪೆ ಎಂದು ಸಾಬೀತಾಗಿರುವುದರಿಂದ ಇನ್ನು ಮುಂದೆ ಯಾವುದೇ ಕಾಮಗಾರಿಯನ್ನು ಸದರಿ ಸಂಸ್ಥೆಗೆ ವಹಿಸಿಕೊಡಬಾರದೆಂದು ತೀರ್ಮಾನಿಸಲಾಯಿತು.

ಶ್ರೀ. ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಚರ್ಚೆಯ ಸಮಯದಲ್ಲಿ ಲ್ಯಾಂಡ್ ಆರ್ಮಿ ಎಂಬುದನ್ನು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್ ಎಂಬುದಾಗಿ ತಿದ್ದುಪಡಿ ಮಾಡಿಕೊಳ್ಳುವುದು ಹಾಗೂ ಸದರಿ ಸಂಸ್ಥೆಯವರು ಪಾಲಿಕೆ ವತಿಯಿಂದ ವಹಿಸಲಾಗಿರುವ ಯಾವುದೇ ಕಾಮಗಾರಿಗಳನ್ನು ಪ್ರಾರಂಭ ಮಾಡದೇ ಇದ್ದಲ್ಲಿ ಅಂತಹ ಕಾಮಗಾರಿಗಳನ್ನು ವಾಪಸ್ಸು ತೆಗೆದುಕೊಳ್ಳುವುದು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಅವರೇ ಮಾಡಿ ಒಳ್ಳೆಯ ಗುಣಮಟ್ಟದಲ್ಲಿ ಮುಗಿಸಿಕೊಡುವುದೆಂದು ತೀರ್ಮಾನಿಸಲಾಯಿತು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಯನ್ನು ಬ್ಲಾಕ್ ಲಿಸ್ಟ್ ಮಾಡಲಾಗಿದ್ದು, ಹಿಂದೆ ಇವರು ಮಾಡಿರುವ ಕಾಮಗಾರಿ ಕಳಪೆ ಎಂದು ಸಾಬೀತಾಗಿರುವುದರಿಂದ ಪ್ರಸ್ತುತ ಪಾಲಿಕೆ ವತಿಯಿಂದ ವಹಿಸಲಾಗಿರುವ ಯಾವುದೇ ಕಾಮಗಾರಿ ಕೆಲಸಗಳು ಪ್ರಾರಂಭವಾಗದೇ ಇದ್ದಲ್ಲಿ ಅಂತಹ ಕಾಮಗಾರಿಗಳನ್ನು ವಾಪಸ್ಸು ತೆಗೆದುಕೊಳ್ಳುವುದು ಹಾಗೂ ಹಾಲಿ ಪ್ರಗತಿಯಲ್ಲಿರುವ ಕಾಮಗಾರಿ ಕೆಲಸಗಳನ್ನು ಅವರೇ ನಿರ್ವಹಿಸಿ, ಒಳ್ಳೆಯ ಗುಣಮಟ್ಟದಲ್ಲಿ ಮುಗಿಸಿ ಕೊಡಲು ಹಾಗೂ ಇನ್ನು ಮುಂದೆ ಯಾವುದೇ ಕಾಮಗಾರಿಗಳನ್ನು ಸದರಿ ಸಂಸ್ಥೆಗೆ ಪಾಲಿಕೆಯು ವಹಿಸಿಕೊಡಬಾರದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಎಸ್.ಕೆ. ನಟರಾಜ)
ಮಹಾಪೌರರು